International Journal of Kannada Research 2020; 6(3): 92-94

International Journal of Kannada Research
www.kannadajournal.com

**ISSN: 2454–5813**
IJKR 2020; 6(3): 92-94
© 2020 IJKR
www.kannadajournal.com
Received: 19-06-2020
Accepted: 18-07-2020

**ಸುನಿತಾ ಪುಂಡಲಿಕ**
ಸಂಶೋಧನ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

**Corresponding Author:**
**ಸುನಿತಾ ಪುಂಡಲಿಕ**
ಸಂಶೋಧನ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

# ಡಿ.ಎಸ್.ಲಿಂಗರಾಜು ರವರ ಮಾಯಾಲೋಕಕ್ಕೊಂದು ಪಯಣ

**ಸುನಿತಾ ಪುಂಡಲಿಕ**

ಪ್ರವಾಸ ಸಾಹಿತ್ಯವನ್ನು ಆಂಗ್ಲಭಾಷೆಯಲ್ಲಿ 'ಟ್ರಾವೆಲೋಗ್' (Travelogue) ಅಥವಾ 'ಟ್ರಾವೆಲ್ ಲಿಟರೇಚರ್' (Travel Literature) ಎಂದು ಕರೆದರೂ, ಈ ಕುರಿತ ಹೆಚ್ಚಿನ ಮಾಹಿತಿಗಳು ಆಂಗ್ಲ ನಿಘಂಟುಗಳಲ್ಲಿ ದೊರೆಯುವುದಿಲ್ಲ. ಜೋಸೆಫ್ ಪಿಪ್ಲಿ, ರೋಜರ್ ಫಾವ್ಲರ್ ಹಾಗೂ ಜೆ.ಎ.ಸಡನ್ ಮತ್ತಿತರ ಸಾಹಿತ್ಯ ಪರಿಭಾಷಾ ಶಬ್ಧ (Literature Terms) ಟ್ರಾವೆಲ್‌ಲೋಗ್‌ನ ವಿವರಣೆಗಳಿಲ್ಲದಿರುವುದು ಕುತೂಹಲಕರ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ಉಪನ್ಯಾಸದ ಸಂದರ್ಭದಲ್ಲಿ ಹೇಳಿದ್ದಾರೆ.

ಪ್ರವಾಸ ಸಾಹಿತ್ಯವು ಮೊದಲಿಗೆ ಸೃಷ್ಟಿಯಾದುದು ಬ್ರೀಟಿಷರಿಂದ ಪಾಶ್ಚಾತ್ಯರಿಗೆ ಪ್ರವಾಸವು ಒಂದು ಹವ್ಯಾಸವಾಗಿದ್ದರಿಂದ ಸಾಕಷ್ಟು ವಿರಾಮ, ಹಣಕಾಸು ಇತ್ಯಾದಿ ಸೌಲಭ್ಯಗಳ ಮೂಲಕ ಹೊಸ, ಹೊಸ ಅನುಭವಗಳನ್ನು ಹೊಂದಿ ಪ್ರಯಾಣದಿಂದ ಮುದುಡಿದ ಮನಕ್ಕೆ ಚೈತನ್ಯ ಉಕ್ಕಿಸಲು; ಜೀವನೋತ್ಸಾಹ ಮೂಡಿಸಲು ಪ್ರವಾಸ ಕೈಗೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ಒದಗಿದ ವಿಶಿಷ್ಟಾನುಭಗಳನ್ನು ಬರಹದಲ್ಲಿ ಹಿಡಿದಿಡುವ ಪ್ರಯತ್ನವನ್ನು ಪ್ರವಾಸ ಸಾಹಿತ್ಯವೆಂದು ಡಾ.ಎಸ್.ವಿದ್ಯಾಶಂಕರ್ ಅವರು ತಮ್ಮ ಕೃತಿ 'ಪ್ರವಾಸೋಧ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ'ದಲ್ಲಿ ಹೇಳಿದ್ದಾರೆ. ಕನ್ನಡದಲ್ಲಿ ೧೯ನೇ ಶತಮಾನ ದವರೆಗೆ ಜಾತ್ರೆಯಾಗಿ, ತೀರ್ಥಯಾತ್ರೆಯಾಗಿ, ಅನಂತರ ಕ್ಷೇತ್ರ ಮಹಿಮೆ ಇತ್ಯಾದಿಗಳಿಂದ ಪ್ರಾಮುಖ್ಯ ಪಡೆದುಕೊಂಡಿತ್ತೇ ವಿನ: ಸಾಹಿತ್ಯಾಂಶ ಗುಣಗಳು ಗೌಣವಾಗಿದ್ದನ್ನು ಕಾಣಬಹುದು. ಚರಿತ್ರೆ, ಕಾವ್ಯ ಮೊದಲಾದವುಗಳಲ್ಲಿ ಸ್ಥಳಾಭಿಮಾನಿಗಳ ಸುಮಾರು ೧೮೯೦ರಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿಸೂರಿಗಳಿಂದ ರಚಿತವಾದ 'ದಕ್ಷಿಣಭಾರತ ಯಾತ್ರೆ' ಯ ಕನ್ನಡದ ಮೊಟ್ಟಮೊದಲ ಪ್ರವಾಸ ಸಾಹಿತ್ಯವಾಗಿದೆ.

ಡಿ.ಎಸ್.ಲಿಂಗರಾಜು ಅವರು ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಮಾಯಸಂದ್ರ ಗ್ರಾಮದ ಡಿ.ಎಸ್. ಶಿವರಾಜೇಗೌಡ ಮತ್ತು ಬಿ.ಕೆ.ಜಯಮ್ಮ ದಂಪತಿಗಳ ಉದರದಲ್ಲಿ ಜನಿಸಿದರು. ಮಾಯಸಂದ್ರ, ತುರುವೇಕೆರೆ, ಕೋಲಾರ ಮತ್ತು ಚುಂಚನಗಿರಿಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು ೧೯೮೫ರಲ್ಲಿ ಪಡೆದುಕೊಂಡರು. ೧೯೮೫ರಿಂದ ೧೯೯೧ ರವರೆಗೆ ಕುಣಿಗಲ್ ತಾಲೂಕು ಎಡೆಯೂರಿನ ಕಾಲೇಜೊಂದರಲ್ಲಿ ಇಂಗ್ಲೀಷ್ ಉಪನ್ಯಾಸಕರಾಗಿ ಸಾಹಿತ್ಯ ಸೇವೆಯನ್ನು ಸಲ್ಲಿಸಿದ್ದಾರೆ. ನಂತರ ಗೆಜೆಟೆಡ್ ಪರೀಕ್ಷೆಯಲ್ಲಿ ಆಯ್ಕೆಯಾಗಿ ೧೯೯೧ರಿಂದ ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತರಾಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸಿ ಸಧ್ಯ ವಯೋನಿವೃತ್ತಿ ಹೊಂದಿದ್ದಾರೆ. ಇವರು ಪ್ರವಾಸಪ್ರೀಯರು ವರ್ಷಕ್ಕೆ ಒಂದು ರಾಜ್ಯ, ರಾಷ್ಟ್ರಗಳ ಪ್ರವಾಸ ಮಾಡುತ್ತಾರೆ. ಕರ್ನಾಟಕ ಸರ್ಕಾರದ ಉನ್ನತವಾದ ಹುದ್ದೆಯಲ್ಲಿದ್ದುಕೊಂಡು, ಇಲಾಖೆಯ ಸಂಘ ಸಂಸ್ಥೆಗಳಲ್ಲೂ ಸಕಾರಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತ, ಕಾಗದ ಪತ್ರ ಕಡತಗಳ ಅಂಕಿ ಸಂಖ್ಯೆಗಳಲ್ಲಿ ಕಳೆದು ಹೋಗದೇ ಕೆಲಸದ ಒತ್ತಡ, ಅದರಲ್ಲೂ ಇಂಗ್ಲೀಷ ಸಾಹಿತ್ಯದ ವಿದ್ಯಾರ್ಥಿಯಾಗಿದ್ದುಕೊಂಡು ಕನ್ನಡ ಬಲ್ಲವರಿಗಿಂತ ತಾನೇನು ಕಡಿಮೆ ಇಲ್ಲ ಎಂಬಂತೆ ತಾವು ಕೈಗೊಂಡ ರಾಜ್ಯ, ರಾಷ್ಟ್ರಗಳ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ನಿಸರ್ಗ, ಜನಜೀವನ, ನಂಬಿಕೆ, ಸಂಪ್ರದಾಯ ಹೀಗೆ ಹತ್ತು ಹಲವು ವಿಷಯಗಳನ್ನು ಕಲೆ ಹಾಕುವುದರ ಮೂಲಕ ಸ್ಪಷ್ಟವಾದ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ತಮ್ಮ ಬರವಣಿಗೆಯಲ್ಲಿ ತಂದಿದ್ದಾರೆ. ತಾವು ಪ್ರವಾಸ ಹೋಗುವ ಮುಂಚೆ ಆ ಪ್ರದೇಶ ಬಗ್ಗೆ ಕೆಲವೊಂದು ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಂಡು, ಪ್ರವಾಸಕ್ಕೆ

ಬೇಕಾದ ಸೌಕರ್ಯಗಳನ್ನು ಸಿದ್ಧತೆ ಮಾಡಿಕೊಂಡು ಮುಂದೆ ಸಾಗುವರು. ಪ್ರವಾಸ ಕೈಗೊಳ್ಳುವರಿಗೆ ಇವರ ಕಥನಗಳು ಮಾರ್ಗಸೂಚಿಗಳಂತಿವೆ ಎಂದು ಹೇಳಬಹುದು.

ನನ್ನ ಲೇಖನದ ಮೀತಿಯೊಳಗೆ ನ್ಯಾಯ ಒದಗಿಸಬೇಕಾಗಿರುವುದರಿಂದ ಈ ಕೃತಿಯ ಎಲ್ಲ ವಿಷಯ ಗಳನ್ನು ಅರಿಯಲು ಸಾಧ್ಯವಲ್ಲ ಎಂಬ ಕಾರಣಕ್ಕೆ ಕೆಲ ಉಪಶೀರ್ಷಿಕೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೊಳಪಡಿಸಲಾಗಿದೆ. ಕೈಲಾಸ ಮಾನಸ ಸರೋವರಕ್ಕೆ ಪ್ರವಾಸ ಕೈಗೊಂಡ ಡಿ.ಎಸ್. ಲಿಂಗರಾಜುರವರು ತಮ್ಮ ಅನುಭವಗಳನ್ನು ಅಕ್ಷರ ರೂಪಕೊಟ್ಟು ತಮ್ಮೆಲ್ಲ ಭಾವನೆಗಳನ್ನು ಸೊಗಸಾಗಿ ದಾಖಲಿಸಿದ್ದಾರೆ. ಮಾನಸ ಸರೋವರವನ್ನು ಕಂಡು ಅವರು ಹೇಳುವುದು ಹೀಗೆ “ವಿಸ್ತಾರವಾಗಿ ಹರಡಿ ನಿಂತ ಆ ಜಲರಾಶಿ ಲಕ್ಷಾಂತರ ವರ್ಷಗಳಿಂದ ಅದೆಷ್ಟು ಪುಣ್ಯಪುರುಷರನ್ನು, ಮಹಾನುಭಾವರನ್ನು ಕಂಡಿತೋ ಅಂತಹ ಸ್ಥಳಕ್ಕೆ ಹುಲು ಮಾನವನಾದ ಅದರಲ್ಲೂ ಬದುಕನ್ನೇ ಬೋನಸ್ ಆಗಿ ಪಡೆದ ನನ್ನಂತಹ ಒಬ್ಬ ಬಂದು ಕಾಲಿಟ್ಟಿದ್ದಾನೆ ಎಂಬುದೇ ಧನ್ಯತೆಯ ಭಾವ ಉಂಟು ಮಾಡುತ್ತದೆ. ತಕ್ಷಣ ಲಿಂಗರಾಜು ನಿಸರ್ಗಕ್ಕೂ ಇರುವ ವ್ಯತ್ಯಾಸದ ಪರಿಚಯ ಮಾಡಿಸುತ್ತಾರೆ.

ಡಿ.ಎಸ್.ಲಿಂಗರಾಜುರವರು ನೇಪಾಳ ರಾಷ್ಟ್ರದ ಕುರಿತ ಕೆಲವು ಪ್ರಮುಖ ಅಂಶಗಳನ್ನು ದಾಖಲಿಸಿದ್ದಾರೆ. ಅವುಗಳೆಂದರೆ “ಭಾರತದ ಆಗುಹೋಗುಗಳಲ್ಲಿ ಪುರಾತನ ಕಾಲದಿಂದ ಪಾಲ್ಗೊಂಡ ರಾಷ್ಟ್ರ ನೇಪಾಳ. ಜಗತ್ತಿನ ಏಕೈಕ ಹಿಂದು ರಾಷ್ಟ್ರವೆಂಬ ಹೆಗ್ಗಳಿಕೆಯೂ ಇದಕ್ಕಿದೆ. ಸೀತಾಮಾತೆ ಹುಟ್ಟಿದ ಜನಕಪುರಿ, ಗೌತಮನ ಲುಂಬಿಣಿ, ಪಾಂಡವರು ವಾಸಿಸಿದ್ದ ವಿರಾಟ ನಗರ, ಪ್ರಸಿದ್ಧ ಪಶುಪತಿನಾಥ ಮಂದಿರ, ಬಾಲಕಿಯನ್ನು ಪೂಜಿಸುವ ಕುಮಾರಿ ಮಂದಿರ, ಮುಕ್ತಿನಾಥ ಹೀಗೆ ಹಿಂದೂಗಳ ಅನೇಕ ಪವಿತ್ರ ಸ್ಥಳಗಳು ಇಲ್ಲಿವೆ. ಸುಮಾರು ೨.೬೦ ಕೋಟಿ ಜನಸಂಖ್ಯೆ ಇದ್ದು ಸುಮಾರು ೧.೪೭ ಲಕ್ಷ ಚದರ ಕಿಲೋಮೀಟರ್ ವಿಸ್ತಾರವಾಗಿರುವ ಈ ಪುಟ್ಟ ರಾಷ್ಟ್ರ ಪ್ರತಿಶತ ೮೦ರಷ್ಟು ಹಿಂದೂಗಳು ಬಹಳ ಕಾಲದಿಂದ ರಾಜರ ಆಳ್ವಿಕೆಯಲ್ಲಿದ್ದ ರಾಷ್ಟ್ರ ಇದೀಗ ಪ್ರಜಾಪ್ರಭೂತ್ವ ರಾಷ್ಟ್ರವಾಗಿದೆ”.೧

ನೇಪಾಳದ ರಾಜಕೀಯ ಸ್ಥಿತಿಯು ತುಂಬಾ ಅತಂತ್ರವಾಗಿರುವುದನ್ನು ತಿಳಿದು ಸ್ವತಃ ಲೇಖಕರೇ ಬೆರಗಾಗಿದ್ದು ಉಂಟು. ಇಲ್ಲಿ ಪ್ರಧಾನಿ ಯಾರು ಎಂಬ ಲೇಖಕರ ಪ್ರಶ್ನೆಗೆ ಅಲ್ಲಿಯ ನಾಗರಿಕ ಕೊಟ್ಟ ಉತ್ತರ ಹೀಗಿದೆ “ತಾವು ಬೆಳಿಗೆಗೆ ಇದ್ದ ಪ್ರಧನಿಯ ಹೆಸರು ಕೇಳುತ್ತಿದ್ದಿರೋ ಅಥವಾ ಈಗ ಇರುವ ಪ್ರಧಾನಿ ಹೆಸರು ಕೇಳುತ್ತಿದ್ದಿರೋ ಅಂದ. ಮುಂದುವರೆದು ‘ತಪ್ಪು ತಿಳಿಬೇಡಿ ಇಲ್ಲಿ ರಾಜಕೀಯ ತುಂಬಾ ಅತಂತ್ರವಾಗಿದೆ. ರಾತ್ರೋರಾತ್ರಿ ಪ್ರಧಾನಿ ಬದಲಾಗಿರುತ್ತಾರೆ. ನಮಗೆ ಮಾರನೇ ದಿನದ ಪೇಪರ್ ನೋಡಿದಾಗಲೇ ಪ್ರಧಾನಿ ಯಾರೆಂದು ತಿಳಿಯುವುದು ಅದಕ್ಕಾಗಿ ಆಜ್ಞಾ ಪ್ರಧಾನಮಂತ್ರಿ ಎಂಬ ಕಾಲಂ ಕಡ್ಡಾಯವಾಗಿ ಎಲ್ಲಾ ಪತ್ರಿಕೆಗಳಲ್ಲಿ ಇರಬೇಕು ಎಂದು ದೊಡ್ಡದಾಗಿ ನಕ್ಕನು ಆತ. ಅವರು ನಕ್ಕು ಹೇಳಿದ ಮಾತಿನಲ್ಲಿ ವಿಷಾದ ಇತ್ತು. ಇದು ಅಲ್ಲಿಯ ರಾಜಕೀಯ ದೊಂಬರಾಟವನ್ನು ಎತ್ತು ತೋರಿಸುತ್ತದೆ”೨ ಇಲ್ಲಿಯ ಸರ್ಕಾರ ಇದೆ ಎಂದರೆ ಇದೆ ಇಲ್ಲ ಎಂದರೆ ಇಲ್ಲ; ಲೇಕ್ಕಕುಂಟು ಆಟಕ್ಕಿಲ್ಲ ಎಂಬಂತೆ ಇದೆ ಎಂಬುದನ್ನು ತಿಳಿದುಬರುತ್ತದೆ.

ಲೇಖರು ಕಾಠ್ಮಂಡು ನಗರಕ್ಕೆ ಕಾಲಿಟ್ಟಾಗ ಕಂಡಿದ್ದು, ಬಹುತೇಕ ಕಟ್ಟಡಗಳು ಗಿಲಾವಾಗದೆ ಹಾಗೆಯೇ ಇದ್ದಿದ್ದು, ಹಳೆಯ ಕಟ್ಟಡಗಳು, ಕಿತ್ತುಹೋದ ರಸ್ತೆಗಳು, ಗ್ರಾಹಕರನ್ನು ಕೂಗಿಕೂಗಿ ಕರೆಯುವ ಬೀದಿ ಬದಿಯ ವ್ಯಾಪಾರಿಗಳು, ಇಡಿ ನಗರ ಧೂಳು ಮಯ, ಇಲ್ಲಿನ ಜನ ಯಾವಾಗಲೂ ಮುಖಕ್ಕೆ ಮಾಸ್ಕ್ ಹಾಕಿಕೊಂಡೇ ಇರುತ್ತಾರೆ. ನೇಪಾಳ ಜನ ಎಂದರೆ ಥಟ್ಟನೆ ನಮ್ಮ ನೆನಪಿಗೆ ಬರುವುದು ಗೂರ್ಖಾಗಳು ಮತ್ತು ಶೆರ್ಪಾಗಳು. ಕಡು ಬಡತನದಲ್ಲಿ ಜೀವಿಸುತ್ತಿರುವ ಇವರ ಬದುಕಿಗೆ ಯಾವುದೇ ಆಧಾರಗಳಿಲ್ಲ. ಹಿಂದೆಲ್ಲಾ ಗೂರ್ಖಾಗಳು ರಾತ್ರಿ ಹೊತ್ತು ಬೀದಿಗಳಲ್ಲಿ ಸೀಟಿ ಹೊಡೆಯುತ್ತಾ ಗಸ್ತು ಹಾಕುತ್ತಿದ್ದರು. ತಿಂಗಳ ಮೊದಲ ದಿನ ಮನೆಗೆ ಬಂದು ನಮಸ್ತೆ ಸಾಬ್ ಎಂದು ಸೆಲ್ಯುಟ್ ಹಾಕಿ, ಕೊಡುತ್ತಿದ್ದ ಪುಡಿಗಾಸನ್ನು ದುಸರಾ ಮಾತಾಡದೆ ತೆಗೆದುಕೊಂಡು ಹೋಗುತ್ತಿದ್ದ ಬಡಪಾಯಿಗಳು ಈ ಗೂರ್ಖಾಗಳು ಸೆಕ್ಯೂರಿಟಿ ಏಜೆನ್ಸಿಗಳು ತಲೆಯೆತ್ತಿದ ಮೇಲೆ ಇವರ ಗಸ್ತು ಕೆಲಸಕ್ಕೂ ಕಲ್ಲು ಬಿತ್ತು ಎಂಬ ಸಂಗತಿ ಹೀಗೆ ಹತ್ತು ಹಲವು ಸಮಸ್ಯೆಗಳ ಮೇಲೆ ಲೇಖಕರು ಬೆಳಕು ಚೆಲ್ಲಿದ್ದಾರೆ.

ನೇಪಾಳ ರಾಷ್ಟ್ರದ ಇತಿಹಾಸ ಮತ್ತು ನೇಪಾಳ ಎಂಬ ಹೆಸರು ಹೇಗೆ ಹುಟ್ಟಿಕೊಂಡಿತ್ತು ಎಂಬುದನ್ನು ತಮ್ಮ ಈ ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ. “ನೇಪಾಳವಿರುವ ಪ್ರದೇಶದಲ್ಲಿ ಲಕ್ಷಾಂತರ ವರ್ಷಗಳ ಹಿಂದೆ ದೊಡ್ಡ ಸರೋವರವಿತ್ತಂತೆ. ಈ ಸರೋವರಕ್ಕೆ ನಿಪ ಎಂದು ಕರೆಯಲಾಗುತ್ತಿದ್ದು ಮುಂದೆ ನೇಪಾಲ ಎಂದು ಹೆಸರು ಬಂದಿತು ಎಂಬ ಅಭಿಪ್ರಾಯಗಳಿವೆ. ಇಲ್ಲಿನ ಮೂಲ ನಿವಾಸಿಗಳು ನೇವಾರ ಜನಾಂಗದವರಾದ ಕಾರಣ ನೇಪಾಲ ಎಂಬ ಹೇಳಿಕೆಗಳೂ ಇವೆ”. ನೇಪಾಳ ಪುರಾತನ ಐತಿಹಾಸಿಕ ದಾಖಲೆ ಗೋಪಾಲರಾಜ ವಂಶಾವಳಿಯ ಪ್ರಕಾರ ಈ ದೇವಾಲಯವನ್ನು ಲಿಚ್ಛವಿ ವಂಶದ ಅರಸ ಸುಪುಷ್ಪ ದೇವ ಎಂಬಾತ ನಿರ್ಮಿಸಿದ. ನಂತರ ಕ್ರಿ.ಶ. ೧೯೯೯ರಲ್ಲಿ ಅರಸ ಶಿವ ದೇವ ಎಂಬಾತ ಪಶುಪತಿನಾಥನ ದೇವಾಲಯವನ್ನು ಪುನರುಜ್ಜೀವನಗೊಳಿಸಿದ. ಮುಂದೆ ಕ್ರಿ.ಶ.೧೭ನೇ ಶತಮಾನದಲ್ಲಿ ಅರಸ ಭೂಪೇಂದ್ರ ಮಲ್ಲ ಮತ್ತೆ ದೇವಾಲಯವನ್ನು ಪುನರ್ ನಿರ್ಮಿಸಿ ಮತ್ತೆ ಕೆಲವು ದೇವಾಲಯಗಳನ್ನು ಈ ಸಂಕೀರ್ಣಕ್ಕೆ ಹೊಸದಾಗಿ ಸೇರಿಸಿದ. ನೇಪಾಳ ಜನರ ಆರಾಧ್ಯ ದೈವ ಪಶುಪತಿನಾಥ ಆಗಿದ್ದು, ಕ್ರಿ.ಶ. ೭ನೇ ಶತಮಾನದಲ್ಲಿ ಈ ದೇವಾಲಯ ನಿರ್ಮಿಸಲಾದ ಒಂದು ಶೈವ ಕ್ಷೇತ್ರವಾಗಿದೆ. ಇಲ್ಲಿ ಅನೇಕ ಸಾಧು-ಸಂತರು, ಆಶ್ರಮಗಳು, ಶಾಸನಗಳು, ಶಿವಲಿಂಗಗಳು ಇವೆ. ದೇವಾಲಯದ ಗರ್ಭ ಗುಡಿಯ ಎದುರಿಗಿರುವ ದೊಡ್ಡ ಗಾತ್ರದ ನಂದಿ ವಿಗ್ರಹ ಗಮನ ಸೆಳೆಯುತ್ತದೆ. ಇದನ್ನು ೧೯೩೭ರಲ್ಲಿ ದೇಶದ ಮಂತ್ರಿ ಜಂಗ್ ಬಹದ್ದೂರ್ ರಾಣಾ ನಿರ್ಮಿಸಿದನಂತೆ. ದೇವಾಲಯದ ಗರ್ಭಗುಡಿ ಚಿಕ್ಕದಾಗಿದ್ದು ಅದರೊಳಗೆ ಯಾರಿಗೂ ಪ್ರವೇಶವಿಲ್ಲ. ಇಲ್ಲಿ ಪೂಜೆ ಮಾಡುವ ಅರ್ಚಕರು ನಮ್ಮ ಉಡುಪಿಯವರು ಎಂಬುದನ್ನು ಲೇಖಕರು ದಾಖಲಿಸಿದ್ದಾರೆ.

ಹಿಂದೂಗಳು ಮತ್ತು ಬೌದ್ಧರು ಅಣ್ಣ ತಮ್ಮಂದಿರಂತೆ ಸಹಬಾಳ್ವೆಯಿಂದ ಬಾಳಿದರು ಎಂಬುದನ್ನು ಮನಗಾಣಬಹುದು. “ಪ್ರಚಲಿತವಿರುವ ಒಂದು ಕಥೆಯ ಪ್ರಕಾರ ಗೌತಮ ಬುದ್ಧನು ಪಂಚಾಗ್ನಿಗಳ (ನಾಲ್ಕೂ ಬದಿಗಳಲ್ಲಿ ಬೆಂಕಿ ಹಚ್ಚಿ ಮೇಲೆ ಉರಿಯುತ್ತಿರುವ ಸೂರ್ಯನ ನಡುವೆ ಕುಳಿತು ತಪಸ್ಸು ಮಾಡುವುದು) ನಡುವೆ ಪಾರ್ವತಿಯನ್ನು ಕುರಿತು ತಪಸ್ಸು ಮಾಡಿ ಆಕೆಯನ್ನು ಸಂಪ್ರೀತಗೊಳಿಸುತ್ತಾನೆ. ಪಾರ್ವತಿಯು ಬೌದ್ಧ ದೇವತೆ ವಜ್ರ ಯೋಗಿನಿಯ ರೂಪದಲ್ಲಿ ಪ್ರತ್ಯಕ್ಷಳಾಗಿ ಈ ನಾಡಿನಲ್ಲಿ ಬೌದ್ಧರು ಮತ್ತು ಹಿಂದೂಗಳು ಸಹ ಬಾಳ್ವೆಯಲ್ಲಿ ತೊಡಗಲಿ ಎಂದು ಆಶೀರ್ವದಿಸುತ್ತಾಳೆ. ನಂತರ ಪಾರ್ವತಿಯು ಭಾಗಮತಿ ಮತ್ತು ಮಣಿಮತಿ ನದಿಗಳ ದಡದಲ್ಲಿ ಶಿವಲಿಂಗವೊಂದನ್ನು ಸ್ಥಾಪಿಸುವಂತೆ ಬುದ್ಧನಿಗೆ ಸೂಚಿಸುತ್ತಾಳೆ. ಅದಕ್ಕೆ ಒಪ್ಪಿದ ಬುದ್ಧನು ಸ್ಥಾಪನೆ ಮಾಡಿದ ಶಿವಲಿಂಗವು ಕಾರುಣಿಕೇಶ್ವರ ಎಂದು ಹೆಸರು ಪಡೆಯಿತು”೩ ಕಾಠ್ಮಂಡುವಿಗೆ ಬಂದಿಳಿದ ಲೇಖಕರು ಇಲ್ಲಿ ಜೀವಂತ ಕುಮಾರಿಯನ್ನು ಪೂಜಿಸುವ ಸಂಪ್ರದಾಯವನ್ನು ಉಲ್ಲೇಖಿಸಿದ್ದಾರೆ. “ಹನುಮಾನ್ ಡೇಕಾ ದರ್ಬಾರ್ ಚೌಕದ ಬಳಿ ಇರುವ ಕುಮಾರಿ ಮಂದಿರ ಮತ್ತೊಂದು ವಿಶಿಷ್ಟ ಸಂಪ್ರದಾಯ ಪ್ರತೀಕ. ಇಲ್ಲಿ

ಜೀವಂತ ದೇವತೆ ಕುಮಾರಿಯ ದರ್ಶನ ಮಾಡಬಹುದು. ನೆವಾರ ಬ್ರಜಯಾನಿ ಪಂಥದ ಪ್ರಕಾರ ಕೆಲವು ನಿರ್ದಿಷ್ಟ ಲಕ್ಷಣಗಳನ್ನು ಹೊಂದಿದ ನಾಲ್ಕು ವರ್ಷದ ಬಾಲಕಿಯನ್ನು ಆರಿಸಿ ಕರೆತಂದು ಆಕೆಯನ್ನು ತುಲಜಾ ಭವಾನಿಯ ಅವತಾರವೆಂದು ನಂಬಿ ಆರಾಧಿಸುತ್ತಾರೆ. ಕುಮಾರಿ ದೇವಿಯು ಆಗಾಗ ತನ್ನ ಮಂದಿರದ ಕಿಟಕಿಯ ಬಳಿ ಬಂದು ನೆರೆದ ಜನರಿಗೆ ದರ್ಶನ ನೀಡಿ ಮರೆಯಾಗುತ್ತಾಳೆ. ಈ ದರ್ಶನ ಭಾಗ್ಯಕ್ಕಾಗಿ ಜನ ಗಂಟೆಗಟ್ಟಲೆ ಕಾಯುತ್ತಾರೆ. ಕುಮಾರಿ ದೇವಿ ಋತುಮತಿಯಾಗುವವರೆಗೆ ದೇವತೆ ಎಂದು ಪೂಜಿಸಲ್ಪಡುತ್ತಾಳೆ. ನಂತರ ಆಕೆಯ ಜಾಗಕ್ಕೆ ಮತ್ತೊಬ್ಬ ಕುಮಾರಿಯನ್ನು ಆಯ್ಕೆ ಮಾಡಲಾಗುತ್ತದೆ. ಕುಮಾರಿ ದೇವಿ ನೇಪಾಲದ ಅರಸರ ಮನೆ ದೇವತೆ. ಜೀವಂತ ದೇವತೆಯನ್ನು ಪೂಜಿಸುವ ವಿಶಿಷ್ಟ ಸಂಪ್ರದಾಯ ಬೇರೆಲ್ಲೂ ಕಂಡು ಬರುವುದಿಲ್ಲ”೪ ಎಂಬ ಅಂಶವನ್ನು ಇಲ್ಲಿ ಕಂಡುಬರುತ್ತದೆ.

ಲೇಖಕರು ನೇಪಾಳದ ಇನ್ನೊಬ್ಬ ಜನಪ್ರಿಯ ದೇವರಾದ ಮುಕ್ತಿನಾಥನ ಕುರಿತ ಕೆಲ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ಮುಕ್ತಿನಾಥ ಕ್ಷೇತ್ರ ಎಂಟು ಶ್ರೇಷ್ಟ ಶಿವಕ್ಷೇತ್ರಗಳಲ್ಲಿ ಒಂದಾಗಿದೆ. ಮುಕ್ತಿನಾಥ ರಾಜಧಾನಿ ಯಿಂದ ಬಲು ದೂರದಲ್ಲಿ ವಾಸ ಮಾಡುತ್ತಿದ್ದಾನೆ. “ಈತನ ಕ್ಷೇತ್ರ ನೇಪಾಳದ ಮುಸ್ತಾಂಗ್ ರಾಜ್ಯದ ಮುಸ್ತಾಂಗ್ ಜಿಲ್ಲೆಯ ಜೊಂಸುಮ್ ಎಂಬಲ್ಲಿದೆ. ಈ ಸ್ಥಳ ಬೆಟ್ಟಗಳ ನಡುವೆ ಇದ್ದು ಅಲ್ಲಿಗೆ ಅಲ್ಲಿಗೆ ತಲುಪಲು ಸರಿಯಾದ ರಸ್ತೆ ಸಂಪರ್ಕ ಇಲ್ಲ. ಸಣ್ಣ ವಾಹನಗಳು ಮಾತ್ರ ಸಂಚರಿಸಬಲ್ಲ ಕಚ್ಚಾ ರಸ್ತೆ ಇದೆ. ಈ ಕಾರಣದಿಂದ ಬಹುತೇಕ ಯಾತ್ರಿಗಳು ವಿಮಾನ ಪ್ರಯಾಣ ಮಾತ್ರ ಕೈಗೊಳ್ಳುತ್ತಾರೆ. ಪೋಖರಾದಿಂದ ಜೋಂಸಮ್‌ಗೆ ಸುಮಾರು ೧೧೦ ಕಿಲೋಮೀಟರ್ ದೂರವಿದೆ. ಸುಮಾರು ೧೨,೩೫೦ ಅಡಿ ಎತ್ತರ ದಲ್ಲಿರುವ ಈ ಕ್ಷೇತ್ರ ಹಿಂದೂಗಳ ಹಾಗೂ ಬೌದ್ಧರ ಯಾತ್ರಾ ಸ್ಥಳ. ಹಿಂದೂಗಳು ಈ ಸ್ಥಳ ಮುಕ್ತಿಗೆ ಮಾರ್ಗ ತೋರಿಸುವ ಮುಕ್ತಿನಾಥ ಎಂದರೆ ಬೌದ್ಧರು ಈ ಸ್ಥಳವನ್ನು ಚುಮಿಗ್ ಗ್ಯಾತ್ಸಾ ಎನ್ನುತ್ತಾರೆ. ಹಾಗೆಂದರೆ ಟಿಬೆಟ್ ಭಾಷೆಯಲ್ಲಿ ನೂರು ನೀರು ಎಂದು. ಬೌದ್ಧರು ಮುಕ್ತಿನಾಥನನ್ನು ಅವಲೋಕಿತೇಶ್ವರನ ರೂಪ ಎಂದು ನಂಬುತ್ತಾರೆ. ಇಲ್ಲಿ ಢಾಕಿನಿ ಎಂಬ ಶಕ್ತಿಗಳು ವಾಸ ಮಾಡುತ್ತವೆ ಎಂಬ ನಂಬಿಕೆ ಬೌದ್ಧರಲ್ಲಿದೆ. ಇಂತಹಾ ೨೪ ಪುರಾತನ ಬೌದ್ಧ ತಾಂತ್ರಿಕ ಪೂಜಾ ಸ್ಥಳಗಳಿದ್ದು ಅವುಗಳಲ್ಲಿ ಚೊಮಿಗ್ ಗ್ಯಾತ್ಸಾ ಕೂಡಾ ಒಂದು ಎನ್ನ ಲಾಗುತ್ತದೆ. ಈಗ ತಾಂತ್ರಿಕ ಪೂಜೆಗಳು ನಿಂತು ಹೋಗಿವೆ. ಇದಕ್ಕೆ ಆಧುನಿಕತೆಯ ಪ್ರಭಾವವೂ ಕಾರಣ ವಾಗಿರಬಹುದು”.೫ ಎಂದು ಲೇಖಕರು ಶಂಕಿಸುತ್ತಾರೆ.

ನೇಪಾಳದ ಪ್ರವಾಸ ಕೈಗೊಂಡ ಲೇಖಕರು ಅಲ್ಲಿಯ ಪ್ರಯಾಣ ಸೌಲಭ್ಯಗಳ ಕುರಿತು ಚರ್ಚಿಸುತ್ತಾರೆ. ಕಾಠ್ಮಂಡುವಿನಿಂದ ಪೋಖರಾ, ಬಿರಾಟನಗರ, ಭದ್ರಾಪುರ, ಭೈರವ, ನೇಪಾಲ್‌ಗಂಜ್, ಜನಕಪುರ, ಧಾಂಗಡಿ, ಭರತ್‌ಪುರ ಮತ್ತು ತುಂಲಿಂಗ್‌ತರ್‌ಗಳಿಗೆ ಚಿಕ್ಕ ವಿಮಾನಗಳು ಪ್ರತಿದಿನ ಹಾರುತ್ತವಂತೆ. ಈ ಎಲ್ಲಾ ನಗರಗಳು ಕಠ್ಮಂಡುವಿನಿಂದ ಸುಮಾರು ೧೦೦–೨೦೦ ಕಿಲೋಮೀಟರ್ ಅಂತರದಲ್ಲಿವೆ. ಇಲ್ಲಿನ ರಸ್ತೆಗಳ ಪರಿಸ್ಥಿತಿ ಅದ್ವಾನವಾಗಿರುವುದರಿಂದ ವಿಮಾನ ಪ್ರಯಾಣ ಅನಿವಾರ್ಯವೇನೋ! ಸುಮಾರು ೨೦೦ ಕಿಲೋಮೀಟರು ದೂರದ ಫೋಖರಾ ನಗರ ತಲುಪಲು ವಿಮಾನ ಪ್ರಯಾಣವೇ ಉತ್ತಮ. ಈ ಚಿಕ್ಕ ದೇಶದಲ್ಲಿ ೩೬ ವಿಮಾನ ನಿಲ್ದಾಣಗಳಿವೆ. ಆ ಸ್ಥಳಗಳಲೆಲ್ಲಾ ಪ್ರವಾಸಿಗಳಿಗೆ ಊಟ ವಸತಿಗೆ ಉತ್ತಮ ಸೌಲಭ್ಯಗಳಿವೆಯಂತೆ. ಇದೇ ತರಹ ನಮ್ಮ ರಾಜ್ಯ, ದೇಶಗಳಲ್ಲಿ ಇಲ್ಲ ಎಂದು ಮರುಕ ವ್ಯಕ್ತಪಡಿಸುತ್ತಾರೆ. ನಮ್ಮ ರಾಜ್ಯದ ಪ್ರವಾಸಿ ತಾಣಗಳಾದ ವಿಯಪುರ, ಬೀದರ, ಐಹೊಳೆ, ಪಟ್ಟದಕಲ್ಲು, ಮಡಿಕೇರಿ, ಮಂಗಳೂರು, ಉಡುಪಿ, ಮಂತ್ರಾಲಯ ಸ್ಥಳಗಳಿಗೆ ಬರುವ ಪ್ರಯಾಣಿಕರಿಗೆ ಪ್ರಯಾಣ ಸೌಕರ್ಯ, ತಿನ್ನಲು ಊಟ ಮತ್ತು ವಸತಿ ಸೌಕರ್ಯ ನೀಡುವಲ್ಲಿ ಸರ್ಕಾರ ಇಚ್ಚಾಶಕ್ತಿ ಇಲ್ಲದೇ, ಪ್ರವಾಸಿಗರಿಗೆ ಮೂಲಸೌಕರ್ಯ ಒದಗಿಸುವಲ್ಲಿ ವಿಫಲವಾಗಿದೆ ಎಂಬುದು ಲೇಖಕರ ಮನದ ಇಂಗಿತವಾದೆ.

ಲೇಖಕರು ತಾವು ಕೈಗೊಂಡ ಪ್ರವಾಸದುದಕ್ಕೂ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಂಶಯ, ಕುತೂಹಲ ವ್ಯಕ್ತಪಡಿಸುತ್ತ ನೇಪಾಳದ ಸ್ವಾತಂತ್ರ್ಯ ಅಲ್ಲಿಯ ನಾಗರಿಕರ ಬದುಕಿನ ಅಸ್ಥಿರತೆ, ಮಹಿಳೆಯರ ಬದುಕಿನ ಹೋರಾಟ, ರಾಜಕೀಯ ದೊಂಬರಾಟ, ಸಂಪ್ರದಾಯ, ಆಚಾರ–ವಿಚಾರ, ಧರ್ಮ–ದೇವರು, ನಂಬಿಕೆ, ಜನಜೀವನದ ಮೇಲೆ ಬೆಳಕು ಚೆಲ್ಲುತ್ತಾರೆ. ನೇಪಾಳ ದೇಶದ ಬಗ್ಗೆ, ಪರಿಸರದ ಬಗ್ಗೆ, ಸರೋವರ, ಪರ್ವತ, ವಿಸ್ಮಯ ಕುರಿತು ಹೀಗೆ ಮುಂತಾದ ವಿಷಯಗಳನ್ನು ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸುವಂತಹ ಕಾರ್ಯ ಮಾಡಿದ್ದಾರೆ. ಇವರ ಭಾಷೆ ಮತ್ತು ಶೈಲಿ ಎಂತಹವರನ್ನು ಮತ್ತೆ ಮತ್ತೆ ಓದಿಸಿಕೊಳ್ಳುವ ಗುಣವುಳ್ಳದಾಗಿದೆ.

**ಅಡಿಟಿಪ್ಪಣಿಗಳು**

೧. ಮಾಯಾಲೋಕಕ್ಕೊಂದು ಪಯಣ – ಡಿ.ಎಸ್.ಲಿಂಗರಾಜು, ೨೦೧೧, ಪು೨೩
೨. ಅದೇ ಪು ೨೩
೩. ಅದೇ ಪು ೩೨
೪. ಅದೇ ಪು ೩೨
5. ಅದೇ ಪು ೪೫